# ಕೋಟಿ ಕಿರಣಗಳು ಸೂರ್ಯ ದೇವನಿಗೆ

■ ರಾಧೇಶ ತೋಳ್ಪಾಡಿ
ಕಲೆ: ಸಂತೋಷ್ ಸಸಿಹಿತ್ಲು

ಕೋಟಿ ಕಿರಣಗಳು ಸೂರ್ಯ ದೇವನಿಗೆ
ಮೈತುಂಬ ಯಾಕೆ ಉಂಟೋ!
ಕಿರಣ ಬೆರಳಲ್ಲಿ ಕೋಟಿ ಜೀವಗಳ
ಮೈಸವರುವಾಸೆ ಏನೋ!

ಮಣ್ಣು ಮರಳು ಕಣ ಜೀವ ತಾಳುವುದೇ
ಭಾನುವಿನ ಬೆರಳು ಸೋಂಕಿ?
ಪ್ರಾಣ ಶಕ್ತಿಯನು ತಾನು ನೀಡುವೆನು
ಎಂದೇನು ಇವನ ನೋಂಪಿ!

ಮೊಗ್ಗು ಮೊಗ್ಗುಗಳ ಪುಟ್ಟ ಬಾಗಿಲನು
ತೆರೆಯುವವನು ಅಮರ ಪ್ರೇಮಿ!
ಕಾಯಿ ಕಾಯಿಗೂ ಜೀವರಸವುಣಿಸಿ
ಸವಿಯುಣಿಸೊ ಭಾವಕಾಮಿ!

ಹುಲ್ಲು ಹಕ್ಕಿ ಮರ ಎಲ್ಲ ಜೀವರಿಗು
ಇವನೆಡೆಗೆ ಸರಿವ ತುಡಿತ!
ದೂರ ಹೋದರೂ ಕಾಣದಾದರೂ
ಹತ್ತಿರದ ಬಂಧು ಈತ!

ಭೂಮಿ ಚೆಂಡೇನು ಹಾಕಿ ಆಟಕ್ಕೆ
ಉರುಳಿಸಲು ಕಿರಣ ಕೋಲೇ?
ಎಂಥ ಆಟವಿದು! ಏನು ಮಾಟವಿದು!
ಬ್ರಹ್ಮಾಂಡ ಇವನ ಬಯಲೇ?

ಇಂಥ ದೇವನಿಗೆ,ಇವನ ಭಾವನೆಗೆ
ಕೊಡಬಹುದು ಏನು ಹೇಗೆ?
ಬೆಳಗು ಜಾವದಲಿ ಬಳಿಗೆ ಬರುವಾಗ
ತೆರೆದಿಡುವ ಬಾಗಿಲಿವಗೆ!





**ಯಶ್ ಎಸ್.**
7ನೇ ತರಗತಿ, ಫ್ಲಾರೆನ್ಸ್
ಹೈ ಸ್ಕೂಲ್, ಬೆಂಗಳೂರು







**ಶ್ರಾವ್ಯ ಕೆ.**
4ನೇ ತರಗತಿ,
ಅರಿವು ವಿದ್ಯಾಸಂಸ್ಥೆ
ಮೈಸೂರು



**ಅಂಕಿತಾ ಸತೀಶ್**
2ನೇ ತರಗತಿ,
ಎನ್‌ಪಿಎಸ್
ಬೆಂಗಳೂರು



'ಸುಧಾ' ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಅವರೇ ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ವೈಯಕ್ತಿಕ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ. **ವಿಳಾಸ:** editorsu@sudha.co.in